**ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ. ------------------------------------ ಕ್ಲಸ್ಟರ್**

ತರಗತಿ: 7 ಅಂಕ: 40 ವಿಷಯ : ಕನ್ನಡ

# ಸಂಕಲನಾತ್ಮಕ ಮೌಲ್ಯಮಾಪನ-1 2023-24

**1. ಆವರಣದಲ್ಲಿ ಕೊಟ್ಟಿರುವ ಸೂಚನೆಯಂತೆ ಉತ್ತರಿಸಿ :-** 4x1=4

1. ರಾಮು ಏಳನೆಯ ತರಗತಿ ವಿದ್ಯಾರ್ಥಿ **(ಅಂಕಿತನಾಮ ಗುರ್ತಿಸಿ ಬರೆಯಿರಿ)**

2. ಅಕ್ಕಿ ಹಕ್ಕಿಯನ್ನು ತಿನ್ನುತ್ತಿದೆ. **(ವಾಕ್ಯದಲ್ಲಿರುವ ತಪ್ಪನ್ನು ಸರಿಪಡಿಸಿ ಬರೆಯಿರಿ)**

3. ಅರುಣೋದಯ **(ಸಂಧಿ ಬಿಡಿಸಿ ಬರೆಯಿರಿ)**

4. ಕಮಲ **ಮನೆಗೆ** ಹೋದಳು **(ಗೆರೆ ಎಳೆದಿರುವ ಪದದ ವಿಭಕ್ತಿ ಪ್ರತ್ಯಯ ಬರೆಯಿರಿ)**

**2. ಬಿಟ್ಟ ಸ್ಥಳ ತುಂಬಿರಿ:-** 4x1=4

5. ಹಿಲ್ಟನ್ ಹೆಡ್ ದ್ವೀಪ________________ಸಾಗರದಲ್ಲಿದೆ.

6. ಜೇಡರ ದಾಸಿಮಯ್ಯನವರ ಅಂಕಿತನಾಮ________________

7. 'ಸ್ವಾತಂತ್ರ್ಯ ಸ್ವರ್ಗ' ಪದ್ಯ ಬರೆದ ಕವಿ____________________

8. ಹಾಲಪ್ಪನ ಕಾಲನ್ನು ______________ಕಚ್ಚಿತು.

**3. ಕೊಟ್ಟಿರುವ ಪದ್ಯ ಪೂರ್ಣಗೊಳಿಸಿ** 1x2=2

9. ಎಲ್ಲಿ ಭೂರಮೆ______________________

------------------------------------------------------------

------------------------------------------------------------

__________________ ಕಳೆವಳೋ?.

**4. ಕೆಳಗೆ ನೀಡಿರುವ ನುಡಿಗಟ್ಟನ್ನು ಬಳಸಿ ವಾಕ್ಯ ರಚಿಸಿ** 1x2=2

10. ತಲೆದೂಗು

11. ಮುಖ ಅರಳು

**5. ಕೊಟ್ಟಿರುವ ಪ್ರಶ್ನೆಗಳಿಗೆ ಒಂದೇ ವಾಕ್ಯಗಳಲ್ಲಿ ಉತ್ತರಿಸಿ :-** 4x1=4

12. ಜಿಂಕೆಯ ಕುತ್ತಿಗೆಯಲ್ಲಿ ಏನಿತ್ತು?

13. ಹಿಲ್ಟನ್ ಹೆಡ್‌ನಲ್ಲಿರುವ ಸ್ಮಾರಕ ಯಾವುದು?

14. ಪ್ರಾಣಿ-ಪ್ರಾಣಿಗಳ ನಡುವೆ ಯಾವುದಕ್ಕಾಗಿ ಸ್ಪರ್ಧೆ ನಡೆಯುತ್ತದೆ?

15. ಚಪ್ಪರದ ನಡುವೆ ತಾಯಿ ಯಾವ ಆಟ ಆಡುತ್ತಾಳೆ?

**6.. ಕೊಟ್ಟಿರುವ ಪ್ರಶ್ನೆಗಳಿಗೆ 2-3 ವಾಕ್ಯಗಳಲ್ಲಿ ಉತ್ತರಿಸಿ :-** 6x2=12

16. ಸ್ವಾತಂತ್ರ್ಯ ಸ್ವರ್ಗ ಪದ್ಯದಲ್ಲಿ ಕವಿಯು ಬಾಳು ಹೇಗಿರಬೇಕೆಂದು ಆಶಿಸಿದ್ದಾರೆ?

17. ಮಕ್ಕಳು ಸಸಿ ಕಿತ್ತ ಬಗೆಯನ್ನು ನಿಮ್ಮ ಮಾತುಗಳಲ್ಲಿ ವ್ಯಕ್ತಪಡಿಸಿ?

18. ಸರೋವರ, ಕೆರೆ ಮತ್ತು ಹೊಂಡಗಳು ಬೇರೆ ಕೆಲಸಕ್ಕೆ ಬಳಕೆಯಾಗುತ್ತಿವೆ, ಏಕೆ?

19. ತವರು ಮನೆ ನೋಡಲು ಹೇಗಿದೆ?

20. ಶಿವ ತನ್ನ ಭಕ್ತರನ್ನು ಹೇಗೆ ಪರೀಕ್ಷಿಸುತ್ತಾನೆ ನಿಮ್ಮ ಮಾತುಗಳಲ್ಲಿ ಬರೆಯಿರಿ.

21. ಹಿಲ್ಟನ್ ಹೆಡ್ ಸ್ಮಾರಕದ ಬಗ್ಗೆ ವಿವರಿಸಿ.

**7, ಸಂದರ್ಭ ಸಹಿತ ವಿವರಿಸಿ** 2x2=4

22. "ಏಯ್ ಯುವಕ ಈ ಜಿಂಕೆ ನನ್ನ ಆಹಾರ"

23. "ತೋರಿಸು ಬಾರೇ ತವರೂರ"

**8. ಕೊಟ್ಟಿರುವ ಪ್ರಶ್ನೆಗಳಿಗೆ 3-4 ವಾಕ್ಯಗಳಲ್ಲಿ ಉತ್ತರಿಸಿ :-** 2x4=8

24. ಕಾಡನ್ನು ನಾಶ ಮಾಡುವುದರಿಂದ ಆಗುವ ದುಷ್ಪರಿಣಾಮಗಳೇನು?

25. "ಸೀನ ಶೆಟ್ಟರು ನಮ್ಮ ಟೀಚರ್" ಈ ಗದ್ಯ ಭಾಗದಲ್ಲಿ ನೀನು ಮೆಚ್ಚಿದ ಅಂಶಗಳಾವುವು?

Use E-Papers, Save Tress
Above Line Hide When Print Out

| | | |
|---|---|---|
| **ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ. ---------------------------------------- ಕ್ಲಸ್ಟರ್** | | |
| ತರಗತಿ: 7 | ಅಂಕ: 40 | ವಿಷಯ : ಕನ್ನಡ |
| **ಸಂಕಲನಾತ್ಮಕ ಮೌಲ್ಯಮಾಪನ-1 2023-24** | | |

**ಮಾದರಿ ಉತ್ತರ ಪತ್ರಿಕೆ**

1. ರಾಮು
2. ಹಕ್ಕಿ ಅಕ್ಕಿಯನ್ನು ತಿನ್ನುತ್ತಿದೆ.
3. ಅರುಣ+ಉದಯ
4. ಚತುರ್ಥಿ
5. ಅಟ್ಲಾಂಟಿಕ್
6. ರಾಮನಾಥ
7. ಎಂ.ಅಕಬರ ಅಲಿ
8. ಹಾವು
9. ಎಲ್ಲಿ ಭೂರಮೆ ದೇವ ಸನ್ನಿಧಿ ಬಯಸಿ ಬಿಮ್ಮನೆ ಬಂದಳೋ?
ಎಲ್ಲಿ ಮೋಹನ ಗಿರಿಯ ಬೆರಗಿನ ರೂಪಿನಿಂದಲಿ ನಿಂದಳೋ?
ಎಲ್ಲಿ ಮುಗಿಲಲಿ ಮಿಂಚಿನೋಲ್ ಕಾವೇರಿ ಹೊಳೆ ಹೊಳೆ ಹೊಳೆವಳೋ?
ಎಲ್ಲಿ ನೆಲವನು ತಣಿಸಿ ಜನಮನ ಹೊಲದ ಕಳೆಕಳೆ ಕಳೆವಳೋ?

10. ತಲೆದೂಗು:ಯಕ್ಷಗಾನ ಪಾತ್ರಧಾರಿತ ಕುಣಿತ ಕಂಡು ಪ್ರೇಕ್ಷಕರು ತಲೆದೂಗಿದರು.
11. ಮುಖ ಅರಳು :ತಾಯಿಯನ್ನು ಕಾಣುತ್ತಲೇ ಮಗುವಿನ ಮುಖ ಅರಳಿತು.
12. ಜಿಂಕೆಯ ಕುತ್ತಿಗೆಯಲ್ಲಿ ಗೆಜ್ಜೆ ಇತ್ತು.
13. ಹಿಲ್ಟನ್ ಹೆಡ್‌ನಲ್ಲಿರುವ ಸ್ಮಾರಕ ಲಿಬರ್ಟಿ ಓಕ್ ಮರ,
14. ಪ್ರಾಣಿ-ಪ್ರಾಣಿಗಳ ನಡುವೆ ಆಹಾರ ಆಚ್ಛಾದನಗಳಿಗಾಗಿ ಸ್ಪರ್ಧೆ ನಡೆಯುತ್ತದೆ.
15. ಚಪ್ಪರದ ನಡುವೆ ತಾಯಿ ಪಗಡೆ ಆಟ ಆಡುತ್ತಾಳೆ.
16. ಮನುಷ್ಯರು ಸಂಕುಚಿತ ಮನೋಭಾವನೆಯನ್ನು ಬಿಟ್ಟು ವಿಶ್ವಮಾನವರಾಗಿ ಬಾಳಬೇಕೆಂದು ಕವಿಯು ಆಶಿಸಿದ್ದಾರೆ.
17. ಮೊದಮೊದಲು ಮಕ್ಕಳಿಗೆ ಹಿಡಿ ತುಂಬಾ ಸಸಿಗಳನ್ನು ಬುಡಸಮೇತ ಕೀಳುವುದು ಸುಲಭವಾಗಲಿಲ್ಲ. ಅನೇಕ ಸಸಿಗಳನ್ನು ಹಾಳು ಮಾಡಿದರು. ಹತ್ತಾರು ಬಾರಿ ಕಿತ್ತು ಕಿತ್ತು ಪ್ರಯತ್ನಿಸಿ ಅನಂತರ ಅವರಿಗೆ ಕೀಳುವುದು ಅಭ್ಯಾಸವಾಗಿ ವೇಗವೂ ಹಿಡಿಯಿತು.
18. ಸರೋವರ, ಕೆರೆ ಮತ್ತು ಹೊಂಡಗಳು ಬೇರೆ ಕೆಲಸಕ್ಕೆ ಬಳಕೆಯಾಗುತ್ತಿರುವುದಕ್ಕೆ ಕಾರಣ ವಿಮಾನ, ರೈಲ್ವೆ ಮತ್ತು ನಿರ್ಮಾಣಕ್ಕಾಗಿ ಅವುಗಳನ್ನು ಮುಚ್ಚುತ್ತಿದ್ದಾರೆ.ಆದರೆ ಇದರಿಂದ ಆಗುವ ಅಸಮತೋಲನದ ಅರಿವಿಲ್ಲ.

19. ತವರು ಮನೆಯಲ್ಲಿ ಆಲೆ ಆಡುತ್ತಿರುತ್ತದೆ, ಗಾಣ ತಿರುಗುತ್ತಿರುತ್ತದೆ. ಹಂಚಿನ ಮನೆ, ಕಂಚಿನ ಬಾಗಿಲನ್ನು ಹೊಂದಿದೆ. ಮನೆಯ ಮುಂದೆ ಚಪ್ಪರ ಹಾಕಿರುತ್ತದೆ. ಚಪ್ಪರದ ಕೆಳಗೆ ತಾಯಿ ಕುಳಿತು ಪಗಡೆಯಾಡುತ್ತಿರುತ್ತಾಳೆ. ಹೀಗೆ ತವರು ಮನೆ ನೋಡಲು ಹಿತಕರವಾಗಿರುತ್ತದೆ.

20. ಜೇಡರ ದಾಸಿಮಯ್ಯನು ಪರಮ ಶಿವಭಕ್ತ ಶಿವನು ತನ್ನ ಭಕ್ತರ ನಾನಾ ವಿಧಗಳಲ್ಲಿ ಪರೀಕ್ಷಿಸುತ್ತಾನೆ ಎಂದರೆ ಕಷ್ಟಕೊಟ್ಟು ಭಿಕ್ಷೆ ಬೇಡುವಂತೆ ಮಾಡುತ್ತಾನೆ . ಚಿನ್ನವನ್ನು ಪರೀಕ್ಷಿಸುವಂತೆ ಉಜ್ಜಿ ನೋಡುತ್ತಾನೆ . ಚಂದನದಂತೆ ಅರೆಯುತ್ತಾನೆ . ಕಬ್ಬಿನ ಕೋಲಿನಂತೆ ಕತ್ತರಿಸಿ ಹಿಂಡುತ್ತಾನೆ . ಇವೆಲ್ಲಕ್ಕೂ ಹೆದರದೆ ಇದ್ದರೆ ತಾನಿದ್ದೇನೆ ಎಂದು ಬಂದು ಕೈಹಿಡಿದು ಕಾಪಾಡುತ್ತಾನೆ .

Use E-Papers, Save Tress
Above Line Hide When Print Out
SREENIVAS MURTHY 9481806802 KSPTA DODDABALLAPUR

**21**. ಅದು ಲಿಬರ್ಟಿ ಓಕ್ ಮರ. ಐವತ್ತರ ದಶಕದಲ್ಲಿ ಪರಿಸರ ರಕ್ಷಣೆಗಾಗಿ ಜನ ಒಗ್ಗೂಡಿ ಪಣತೊಟ್ಟಿದ್ದು ಈ ಮರದಲ್ಲಿಯೇ ಇದು ಸಂರಕ್ಷಿತ ಜಾಗ, 'ದಯವಿಟ್ಟು ಕಟಕಟೆಯ ಒಳಗೆ ಪ್ರವೇಶ ಬೇಡಿ' ಎನ್ನುವ ಫಲಕವನ್ನು ನೆಟ್ಟಿದ್ದಾರೆ. ನಂತರ ಈ ಮರದ ಸಾನಿಧ್ಯಎಷ್ಟು ಪ್ರಸಿದ್ಧವಾಯಿತು ಎಂದರೆ ಎಷ್ಟೋ ವಿವಾಹಗಳಾಗಿವೆ ಎಂದು ಲೇಖಕರು ಹೇಳುತ್ತಾರೆ.
**22.** "ಈ ವಾಕ್ಯವನ್ನು ಡಾ ನಾರ್ಬರ್ಟ್ ಡಿಸೋಜರವರು ಬರೆದಿರುವ ಪುಟ್ಟಜ್ಜಿ ಪುಟ್ಟಜ್ಜಿ ಕಥೆ ಹೇಳು ಎಂಬ ಗದ್ಯಭಾಗದಿಂದ ಆರಿಸಲಾಗಿದೆ ಈ ಮಾತನ್ನು ಹುಲಿಯು ಯುವಕನಿಗೆ ಜಿಂಕೆಯನ್ನು ಅಟ್ಟಿಸಿಕೊಂಡು ಬಂದ ಸಂದರ್ಭದಲ್ಲಿ ಹೇಳಿತು.

**23.** ಈ ವಾಕ್ಯವನ್ನು ಭಾಗ್ಯದ ಬಳೆಗಾರ ಎಂಬ ಜನಪದ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ ಈ ಮಾತನ್ನು ಬಳೆಗಾರ ಮುತ್ತೈದೆ ಹೆಂಗಸಿಗೆ ಆಕೆಯು ತವರಿಗೆ ಹೋಗಿ ಬಾ ಎಂದು ಕೇಳಿಕೊಂಡ ಸಂದರ್ಭದಲ್ಲಿ ಹೇಳಿದನು.

**24**. ಕಾಡನ್ನು ನಾಶ ಮಾಡುವುದರಿಂದ ಅಲ್ಲಿದ್ದ ಹಕ್ಕಿ ಪಕ್ಷಿಗಳು ಬೇರೆ ತಾಣಕ್ಕೆ ಹೋಗಬೇಕಾಗುತ್ತದೆ . ಮೇವು ಇಲ್ಲದ್ದರಿಂದ ಚಿಗರೆಗಳುಮಾಯವಾಗುತ್ತವೆ .ಈ ಚಿಗರೆಗಳನ್ನು ಬೇಟೆಯಾಡಿ ಜೀವಿಸಿದ್ದ ಹುಲಿ, ಚಿರತೆ ಮತ್ತು ಸಿಂಹಗಳು ನಾಶವಾಗುತ್ತದೆ. ಅವಿತುಕೊಳ್ಳಲು ಮರೆ ಇಲ್ಲದ್ದರಿಂದ ತೋಳ ಕರಡಿಗಳು ಓಡಿ ಹೋಗುತ್ತವೆ. ಹಣ್ಣುಹಂಪಲುಗಳು ಸಿಗದಿರುವುದರಿಂದ ಇಣಚಿ ಕಣ್ಣು ಕಪ್ಪಡಿಗಳು ಬೇರೆ ಕಡೆಗೆ ಪ್ರಯಾಣ ಬೆಳೆಸುತ್ತವೆ. ಕಾಡು ಪ್ರಾಣಿಗಳಿಗೆ ಆಹಾರ, ವಸತಿಯ ಕೊರತೆಯಿಂದ ವಿನಾಶವಾಗುತ್ತದೆ . ಕಾಡುಗಳ ಅಲಭ್ಯತೆಯಿಂದ ಮಳೆ ಕಡಿಮೆಯಾಗಿ ಅಂತರ್ಜಲ ಕಡಿಮೆಯಾಗುತ್ತದೆ. ಆಮ್ಲಜನಕದ ಕೊರತೆ ಮತ್ತು ಇಂಗಾಲದ ಡೈ ಆಕ್ಸೈಡ್ ಹೆಚ್ಚಿ ವಾಯುಮಾಲಿನ್ಯ ಉಂಟಾಗುತ್ತದೆ. ಪ್ರಕೃತಿಯ ಸಮತೋಲನ ತಪ್ಪಿ ಅಸಮತೋಲನದಿಂದ ಅನೇಕ ದುಷ್ಪರಿಣಾಮಗಳಾಗುತ್ತದೆ.

**25.** ವಿದ್ಯಾರ್ಥಿಯು ಮೆಚ್ಚಿದ ಅಂಶಗಳನ್ನು ಬರೆಯುತ್ತಾರೆ.

Use E-Papers, Save Tress
Above Line Hide When Print Out

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ. ------------------------------------------------ ಕ್ಲಸ್ಟರ್

ತರಗತಿ: 7 ಅಂಕ: 40 ವಿಷಯ : ಕನ್ನಡ

# ಸಂಕಲನಾತ್ಮಕ ಮೌಲ್ಯಮಾಪನ-1 2023-24

## ಮೌಖಿಕ ಪ್ರಶ್ನೆ ಪತ್ರಿಕೆ

1. ಬೀಜ ಪ್ರಸರಣ ಯಾವುದರ ಮೂಲಕ ನಡೆಯುತ್ತದೆ?
2. ಪುಟ್ಟದೊಂದು ಊರ ಹೊರಗೆ. . . . . . ಪೂರ್ಣ ಮಾಡು
3. ಹಿಲ್ಟನ್ ಹೆಡ್ ದ್ವೀಪ ಮೊದಲು ಹೇಗಿತ್ತು?
4. ಇವುಗಳನ್ನು ಬಿಡಿಸಿ: ಏಕೈಕ. ಶಿವೈಕ್ಯ, ಇತ್ಯಾದಿ,ರವೀಂದ್ರ,

ದೇವೇಂದ್ರ

5. ಮಿಸುನಿ ಎಂದರೇನು?
6. ಭಾಗ್ಯದ ಬಳೇಗಾರ ಜನಪದ ಗೀತೆಯ ಒಂದು ಪ್ಯಾರಾ ಹಾಡಿ.

7.ಸ್ವಾತಂತ್ರ್ಯ ಸ್ವರ್ಗ ಪದ್ಯದ ಕವಿ ಯಾರು?

8. ದಟ್ಟಿಕುಪ್ಪಸ ಎಂದರೇನು?
9. ಇವನ್ನು ಓದಿ; ೧೯೪೭. ೧೯೫೦. ೬೯ ೭೫
10. ಲಾಭ ಇದರ ವಿರುದ್ಧ ಪದವೇನು?

| ಅ. ನಂ | ವಿದ್ಯಾರ್ಥಿ ಹೆಸರು | ಪ್ರಶ್ನೆಗಳ ಸಂಖ್ಯೆ | | | | | | | | | | ಪಡೆದ ಅಂಕ |
|---|---|---|---|---|---|---|---|---|---|---|---|---|
| | | 1 | 2 | 3 | 4 | 5 | 6 | 7 | 8 | 9 | 10 | |
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |

Use E-Papers, Save Tress
Above Line Hide When Print Out
SREENIVAS MURTHY 9481806802 KSPTA DODDABALLAPUR